## ಅತೃಪ್ತ ಕಥೆ

‘ಅಮ್ಮಲು’ (ಏ. 18, ಸ. ರಘುನಾಥ) ಕಥೆ ಬಹಳ ಆಪ್ತವಾಗಿದೆ. ಕಷ್ಟವೋ ಸುಖವೋ, ಬಡತನದ ಬೇಗೆಯಲ್ಲಿ ಬೇಯುತ್ತಾ, ಮಕ್ಕಳ ಭವಿಷ್ಯದ ಕನಸುಗಳನ್ನು ಹೆಣೆಯುತ್ತಾ ಜೀವಿಸುವ ಹಳ್ಳಿಯ ಹೆಂಗಳೆಯರ ಮನೋವೇದನೆಯನ್ನು ಕಟ್ಟಿಕೊಡುವಲ್ಲಿ ಸಫಲವಾಗಿದೆ. ಕಷ್ಟಗಳನ್ನು ಮೈತುಂಬ ಹೊದ್ದುಕೊಂಡು ಅದರಲ್ಲೇ ರಂಜನೀಯತೆಯ ಎಳೆಗಳನ್ನು ಮೀಟುತ್ತಾ ಸಾಗುತ್ತಿರಬೇಕಾದರೆ ರಾಜಕೀಯ ಎಂಬ ವಿಷಗಾಳಿ ಹಳ್ಳಿಯನ್ನು ಕಲುಷಿತಗೊಳಿಸುತ್ತದೆ. ಹಳ್ಳಿ ಸೊಗಡಿನ ಭಾಷೆಯ ‘ಅಮ್ಮಲು’ ಇಷ್ಟವಾಯಿತು.



—ವೀರಭದ್ರ ರಟ್ಟಿಹಳ್ಳಿ, ಹುಬ್ಬಳ್ಳಿ

## ಗ್ರಾಮೀಣ ಸೊಗಡಿನ ಮೆರುಗು

ಮನಮಿಡಿಯುವ ಕಥೆ. ಪ್ರಸ್ತುತ ಚುನಾವಣಾ ಸಮಯದಲ್ಲಿ ತಮ್ಮತಮ್ಮ ನಾಯಕರ ಗೆಲುವಿನ ವಿಚಾರವಾಗಿ ಸ್ಪರ್ಧೆಗಳನ್ನು ಕಟ್ಟಿಕೊಂಡು ತಮ್ಮ ಆಸ್ತಿ ಪಾಸ್ತಿ ಕಳೆದುಕೊಂಡು ಬೀದಿ ಪಾಲಾಗುವ ಅಮಾಯಕರ ಚಿತ್ರಣವನ್ನು ಈ ಕಥೆಯಲ್ಲಿ ನಿರೂಪಿಸಲಾಗಿದೆ. ಗ್ರಾಮೀಣ ಸೊಗಡಿನ ಭಾಷೆ ಈ ಕಥೆಗೆ ಮೆರುಗು ನೀಡಿದೆ.

—ಗಾಯತ್ರಿ ವೆಂಕಟೇಶ್, ಮೈಸೂರು

## ಕಾಡಬೇಕಿದೆ ಸಣ್ಣ ಪಾಪಪ್ರಜ್ಞೆ

‘ಆಹಾರ ಪದಾರ್ಥಗಳ ದುರ್ಬಳಕೆಗೆ ಕಡಿವಾಣ ಹಸಿವಿನ ಸಮಸ್ಯೆಗೆ ಉತ್ತರ, ಪರಿಸರಕ್ಕೂ ಹಿತ’ (ಏ. 18, ರಘುನಾಥ ಚ.ಹ.) ‘ನಿಮ್ಮೊಡನೆ’ ಬರಹ ಸಕಾಲಿಕವಾಗಿದೆ. ಶೇ.20ರಷ್ಟು ಆಹಾರ ಅಪವ್ಯಯವಾಗುವುದು ನಿಜಕ್ಕೂ ಗಂಭೀರ ವಿಷಯ. ಅನ್ನವನ್ನು ಚೆಲ್ಲಿದರೆ ದರಿದ್ರ ಬರುತ್ತದೆ, ಬಡಿಸಿದ ಪದಾರ್ಥದ ಒಂದು ಅಗುಳನ್ನೂ ಚೆಲ್ಲಬಾರದು ಎನ್ನುವ ನೀತಿ ಇತ್ತು. ಆದರೆ ಇದು ಈಗ ಹಣ ದಾಹದ ರಾಜಕೀಯ ವ್ಯಕ್ತಿಗಳಿಗೆ ಅನ್ವಯಿಸುತ್ತದೆ. ಈ ಸ್ಥಿತಿ ಬದಲಾಗಬೇಕು. ಆಹಾರ ಪದಾರ್ಥಗಳನ್ನು ಮೋರಿಗೆ ಚೆಲ್ಲುವುದು ಮದುವೆ ಸಮಾರಂಭಗಳಲ್ಲಿ, ಹೋಟೆಲ್‌ಗಳಲ್ಲಿ ಸಾಮಾನ್ಯ ಎನ್ನುವಂತಾಗಿದೆ. ಇದನ್ನು ತಡೆಗಟ್ಟುವುದು ಸುಲಭವಲ್ಲ. ಈ ಬಗ್ಗೆ ಗಂಭೀರ ಚಿಂತನೆ ಅಗತ್ಯ. ಅಮೂಲ್ಯ ಆಹಾರವನ್ನು ಚೆಲ್ಲುವುದು ಪಾಪ ಕಾರ್ಯ ಎನ್ನುವ ನೈತಿಕ ಪ್ರಜ್ಞೆ ಬೆಳೆಯಬೇಕು. ಇದು ಸುಲಭ ಸಾಧ್ಯವಲ್ಲ, ಆದರೂ ಪ್ರಯತ್ನ ಅಗತ್ಯ.

—ಸತ್ಯಬೋಧ, ಬೆಂಗಳೂರು

## ಕಟುಸತ್ಯದ ಅನಾವರಣ

‘ಕೊಪ್ಪಳದ ಸಂಕಷ್ಟಕ್ಕೆ ನಾಡು ಕುರುಡೇ’ (ಏ. 18, ಪ್ರಕಾಶ ಕಂದಕೂರ) ಚಿತ್ರಪಟ ಕಥನ ನಮ್ಮ ಬರದ ನಾಡಿನ ಕಟುಸತ್ಯದ ಅನಾವರಣದಂತಿದೆ. ನೀರಿನ ಅಭಾವದ ಭೀಕರತೆಯನ್ನು ತೆರೆದಿಟ್ಟಿದೆ. ರಾಡಿ ನೀರನ್ನೇ ಕುಡಿಯುವ ಚಿತ್ರವಂತೂ ಮನಸ್ಸನ್ನು ಕಲಕಿಬಿಟ್ಟಿತು. ಆ ನೀರಿಗಾಗಿ ಮೈಲಿಗಟ್ಟಲೆ ನಡೆಯುವ ಚಿತ್ರಣ ಬೇಸರ ಮೂಡಿಸಿತು.

—ಎಸ್.ವಿ. ನಾಯಕ ರಾಣೆ, ಧಾರವಾಡ




## ಕಣ್ಣಿಗೂ, ಮನಸ್ಸಿಗೂ ತಂಪೆರೆಯಿತು

‘ಹಿಮ ಮರುಳು’ (ಏ. 18, ರಹಮತ್ ತರೀಕೆರೆ) ಮುಖಪುಟ ಲೇಖನ ಹಿಮಾಲಯದ ಚೆಲುವನ್ನು ತೆರೆದಿಟ್ಟಿತು. ಹಿಮಪರ್ವತಗಳು, ಜಾರು ಕಣಿವೆಗಳು, ಗಿರಿಕಂದರ, ಬಯಲು ಹಾದಿಯ ಬೆರಗು–ಬೆಡಗನ್ನು ಮನೋಹರವಾಗಿ ಚಿತ್ರಿಸಿದ್ದಾರೆ. ಮನಸ್ಸಿಗೆ ಸಂತೋಷ ನೀಡಿದ ಸುಂದರ ಅನುಭವ ಕಥನ. ಧಗೆಯ ಈ ದಿನಗಳಲ್ಲಿ ಹಿಮ ಪರ್ವತಗಳ ಸುಂದರ ಚಿತ್ರಗಳನ್ನು ಕಂಡು ಕಣ್ಣುಗಳು ತಂಪಾದವು.

– ಸುಭಾಷಿನಿ, ಹಾಸನ

## ಮಂಜಿನ ಮಳೆ

ರಹಮತ್ ತರೀಕೆರೆ ಅವರ ಮುಖಪುಟ ಲೇಖನ ಮನಕೆ ತಂಪೆರೆಯಿತು. ಹಿಮಗಣಿಯ ಸೌಂದರ್ಯವನ್ನು ಪ್ರತ್ಯಕ್ಷವಾಗಿ ಕಂಡಂತಾಯಿತು. ಬಿರುಬಿಸಿಲ ಬೇಗೆಯಲ್ಲಿ ‘ಸುಧಾ’ ಮನಸ್ಸಿಗೆ ತಂಪು ನೀಡಿದಳು. ಮಂಜಿನ ಮಳೆ ಸುರಿಸಿದಳು.

—ಸುಮನಾ, ಬೆಂಗಳೂರು

## ಅದ್ಭುತ ಜೀವನಗಾಥೆ

‘ಡಾಕ್ಟರ್ ಸಾಹೇಬ್’ ಧಾರಾವಾಹಿ ಒಂದು ಅದ್ಭುತ ರಾಜಕೀಯ ಸಾಂಸ್ಕೃತಿಕ ಕಥನ. ಲೋಹಿಯಾ ಅವರ ಜೀವನಗಾಥೆಯ ನೆಪದಲ್ಲಿ ನಟರಾಜ್ ಹುಳಿಯಾರ್ ಅವರು ಎಂಥ ಅಪೂರ್ವ ರಾಜಕೀಯ ಸ್ಥಿತ್ಯಂತರಗಳನ್ನು ಪರಿಚಯಿಸುತ್ತಿದ್ದಾರೆ. ಅದರಲ್ಲೂ ಧಾರಾವಾಹಿಯ ಎರಡನೇ ಭಾಗದಲ್ಲಿ ಲೋಹಿಯಾ ಅವರು ಜರ್ಮನಿಯಲ್ಲಿ ಅಧ್ಯಯನ ನಡೆಸುವ ಸಮಯ ಅಲ್ಲಿಯ ರಾಜಕೀಯ, ಸಾಮಾಜಿಕ ಬೆಳವಣಿಗೆಯ ಬಗ್ಗೆ ಅವರು ಭಾಗವಹಿಸಿದ ಕ್ರಮ ಎಷ್ಟು ಮಹತ್ವಪೂರ್ಣ. ತನ್ನ ಕುತಂತ್ರಗಳ ಮೂಲಕ ಹಿಟ್ಲರ್ ಬೇರುಬಿಟ್ಟುಕೊಳ್ಳುವ ಸಂದರ್ಭ ಮತ್ತು ಲೋಹಿಯಾ ಅವರು ಪಾದರಸದಂತೆ ಅದನ್ನು ಅರಿಯಲು ತಮ್ಮನ್ನು ತೊಡಗಿಸಿಕೊಳ್ಳುವ ಸಂದರ್ಭ ಅತ್ಯಂತ ಸೂಕ್ಷ್ಮವಾಗಿ



ದಾಖಲುಗೊಂಡಿದೆ. ಇಂಥ ಬರವಣಿಗೆಯನ್ನು ನಮ್ಮ ಅಧ್ಯಾಪಕಮಿತ್ರರು ಓದುವುದರ ಮೂಲಕ ತಮ್ಮ ವಿದ್ಯಾರ್ಥಿಗಳಿಗೆ ಪರಿಚಯಿಸಬೇಕು. ಸ್ವಾತಂತ್ರ್ಯ ಹೋರಾಟದ ಸಂದರ್ಭ ಹಾಗೂ ವಿಶ್ವದ ಸೂಕ್ಷ್ಮ ರಾಜಕೀಯ ವಿದ್ಯಮಾನಗಳು ಒಂದಕ್ಕೊಂದು ಡಿಕ್ಕಿ ಹೊಡೆಯುತ್ತಿದ್ದ ಕಾಲಘಟ್ಟವದು. ಇದನ್ನು ಕ್ರಮಬದ್ಧವಾಗಿ ಓದದಿದ್ದರೆ ನಮ್ಮ ಸ್ವಾತಂತ್ರ್ಯ ಹೋರಾಟದ ಮಹತ್ವದ ಏರುಪೇರುಗಳನ್ನು ಅರಿಯುವಲ್ಲಿ ವಂಚಿತರಾದಂತೆ.

—ಶೂದ್ರ ಶ್ರೀನಿವಾಸ್, ಬೆಂಗಳೂರು

## ವೈಚಾರಿಕ ಜೀವನಚರಿತ್ರೆ

‘ರಾಮಮನೋಹರ ಲೋಹಿಯಾ ಜೀವನಯಾನ’ ವೈಚಾರಿಕ ಜೀವನಚರಿತ್ರೆಯ ಮೊದಲ ಕಂತು ಓದಿ ಸಂತಸವಾಯಿತು. ಲೇಖಕರು ಲೋಹಿಯಾರವರ ಬದುಕಿನ ಘಟನೆಗಳನ್ನು ಅನಗತ್ಯ ಲಂಬಿಸದೆ ಅವರನ್ನು ಪರಿಚಯಿಸಿದ್ದಾರೆ. ‘ಬೆಳೆಯುವ ಸಿರಿ ಮೊಳಕೆಯಲ್ಲಿ’ ಎಂಬುದು ಲೋಹಿಯಾ ಬದುಕಿನಲ್ಲೂ ನಿಜ. ಧಾರಾವಾಹಿ ಓದುತ್ತಾ, ಲೋಹಿಯಾರವರ ಬದುಕು ಜಾತಿಮುಕ್ತವಾಗಲು ಕಾರಣ, ಗಾಂಧಿ ಪ್ರೇಮ, ಬಾಲ್ಯದ ಬಂಡುಕೋರತನ, ಪ್ರತಿಭಟನೆಗಳು, ಅಪಾರ ಓದಿನ ವ್ಯಾಪ್ತಿ, ಕಾಪಿಟ್ಟುಕೊಂಡ ಗೆಳೆತನ, ಅಧ್ಯಾಪಕರನ್ನು ಬಿಡದ ವಾದಶೂರತ್ವ, ಅದರಲ್ಲಿನ ತಾರ್ಕಿಕತೆ, ಲೋಹಿಯಾ ನೆಹರೂ ಸಂಬಂಧ ನೆನಪಾಗುತ್ತಿದೆ. ಜೀವನಚರಿತ್ರೆ ಜೊತೆಗೆ ವೈಚಾರಿಕತೆಯೂ ಪರಿಚಯವಾಗುತ್ತಿದೆ.

—ಗಂಗಾಧರ ಬಿ.ಎಂ., ಶಿರಾ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in